**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 12.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ.ಎಸ್ ಆರ್ ಎ ವಕೀಲರಿಂದಃ**

ಜಯರಾಜ ಮತ್ತು ಮಂಜುನಾಥ ನನ್ನ ಮಕ್ಕಳು. ಪ್ರಸ್ತುತ ಅರ್ಜಿ ಸಲ್ಲಿಸಲು ನನ್ನ ಮಗ ಜಯರಾಜ ಮಾಹಿತಿ ನೀಡಿರುತ್ತಾರೆ. ಅರ್ಜಿದಾರ ನಂ.2 ಆಟೋ ಚಲಾಯಿಸುತ್ತಾರೆ. ಈ ಪ್ರಕರಣದಲ್ಲಿ ನನ್ನ ಮಕ್ಕಳು ಸಹ ಸಾಕ್ಷಿ ನುಡಿಯುತ್ತಾರೆ. ಅರ್ಜಿದಾರ ನಂ.2 ಸಾಕ್ಷಿ ನುಡಿಯುತ್ತಾರೆ. ನನ್ನ ಗಂಡ ಸೆಕ್ಯೂರಿಟಿಯಾಗಿ ಇಂಡಸ್ಟ್ರೀಯಲ್ ಏರಿಯಾದಲ್ಲಿ ಸದರ್ನ ಫೆರೋ ಲಿಮಿಟೆಡ್‌ನಲ್ಲಿ ಕೆಲಸ ಮಾಡುತ್ತಿದ್ದರು. ಅವರು ಸುಮಾರು 25 ವರ್ಷಗಳಿಂದ ಅದೇ ಕೆಲಸ ಮಾಡುತ್ತಿದ್ದರು. ನನ್ನ ಗಂಡ ಇ ಎಸ್ ಐ ಹಾಗೂ ಪಿ ಎಫ್ ಸೌಲಭ್ಯಗಳನ್ನು ಹೊಂದಿದ್ದರು ಆದರೆ ಅದನ್ನು ತೆಗೆದುಕೊಂಡಿಲ್ಲ. ಅವರ ಇ ಎಸ್ ಐ ನಂ.5815350997 ಎಂದರೆ ಸರಿ. ಪ್ರತಿತಿಂಗಳು ಸಂಬಳದಲ್ಲಿ ಪಿ ಎಫ್ ವಿಷಯವಾಗಿ ಮೊತ್ತ ಕಡಿತವಾಗುತ್ತಿತ್ತು ಎಂದರೆ ಸರಿ. ನನ್ನ ಗಂಡ ತೀರಿಕೊಳ್ಳುವ ದಿನದಂದು ಅವರ ಕೆಲಸದ ವೇಳೆ ರಾತ್ರಿ 8.00 ರಿಂದ ಬೆಳಿಗ್ಗೆ 8.00 ಗಂಟೆಯವರೆಗೆ ಇತ್ತು. ಆ ದಿನ ನನ್ನ ಗಂಡನ ಕೆಲಸದ ವೇಳೆ ರಾತ್ರಿ 10.00 ಗಂಟೆಯಿಂದ ಬೆಳಿಗ್ಗೆ 6.00 ಗಂಟೆಯವರೆಗೆ ಇತ್ತು ಎಂದರೆ ಸರಿ. ಬೆಳಿಗ್ಗೆ 6.00 ಗಂಟೆಗೆ ಅವರು ಕೆಲಸ ಮುಗಿಸಿಕೊಂಡು ಹೋದ ನಂತರ ಬೇರೆ ಸೆಕ್ಯೂರಿಟಿ ಗಾರ್ಡ ಬರುತ್ತಿದ್ದರು ಎಂದರೆ ಸರಿ. ಆ ದಿನ 6.00 ಗಂಟೆಗೆ ನನ್ನ ಗಂಡನ ಕೆಲಸ ಮುಗಿದ ನಂತರ ಅವರು 1.00 ಗಂಟೆ ಅವಧಿಯವರೆಗೆ ಅಲ್ಲಿಯೇ ಕೂತು ಬೇರೆ ಸೆಕ್ಯೂರಿಟಿ ಗಾರ್ಡ ಬಂದ ನಂತರ ಅವರಿಗೆ ನನಗೆ ಆರೋಗ್ಯದಲ್ಲಿ ತೊಂದರೆಯಾಗುತ್ತಿದೆ ಹಾಗೂ ನನ್ನ ಮಗನಿಗೆ ಸ್ವಲ್ಪ ಫೋನ್ ಮಾಡು ಎಂದು ಹೇಳಿದ್ದರು ಎಂದರೆ ಸಾಕ್ಷಿ ಅದು ಸುಳ್ಳು ನನ್ನ ಗಂಡ ನಮಗೆ ಫೋನ್ ಮಾಡಿಯೇ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು 7.00 ಗಂಟೆಗೆ ನನ್ನ ಗಂಡ ಆಗಲೇ ತೀರಿಕೊಂಡಿದ್ದರು ಅವರನ್ನು ಯಾರೂ ನೋಡಿಯೇ ಇಲ್ಲ ಎಂದು ನುಡಿಯುತ್ತಾರೆ. ಕಂಪನಿಯವರು ಬೆಳಿಗ್ಗೆ 6.00 ಗಂಟೆಗೆ ನನ್ನ ಮಗನಿಗೆ ಫೋನ್ ಮಾಡಿ ನನ್ನ ಗಂಡನಿಗೆ ಒಮ್ಮೆ serious ಇದ್ದಾರೆ ಎಂದು ಹೇಳಿದರು ನಂತರ 5 ನಿಮಿಷದಲ್ಲಿ ಫೋನ್ ಮಾಡಿ ಅವರು ತೀರಿಕೊಂಡಿರುತ್ತಾರೆಂದು ತಿಳಿಸಿರುತ್ತಾರೆ. ಆಗ ಬೆಳಿಗ್ಗೆ 6.00 ಗಂಟೆಯಾಗಿತ್ತು. ಈ ವಿಷಯವನ್ನು ನಿಮ್ಮ ವಕೀಲರಿಗೆ ಹೇಳಿರುತ್ತಿರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಬೆಳಿಗ್ಗೆ 6.00 ಗಂಟೆಗೆ ನನ್ನ ಮಗನ ಫೋನ್‌ಗೆ ಫೋನ್

ಬಂದಿರುತ್ತದೆ ಎಂದು ತೋರಿಸಲು ನಾನು ಫೋನ್ ಕಾಲ್ ಡಿಟೇಲ್ಸ ಹಾಜರಪಡಿಸಿರುವುದಿಲ್ಲ. ಬೆಳಿಗ್ಗೆ 6.00 ಗಂಟೆಗೆ ನನ್ನ ಮಗನಿಗೆ ಫೋನ್ ಬಂದಿರುತ್ತದೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ಫೋನ್ ಮಾಡಿದ ನಂತರ 7.30 ಗಂಟೆ ಸುಮಾರಿಗೆ ನಿಮ್ಮ ಮಗ ಬಂದಿರುತ್ತಾನೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾನೆ. ನನ್ನ ಮಗ ನನ್ನ ಗಂಡನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ನಂತರ ಅವರು ತೀರಿಕೊಂಡಿರುತ್ತಾರೆಂದು ಬೆಳಿಗ್ಗೆ 7.40 ಗಂಟೆಗೆ ನಮಗೆ ತಿಳಿಸಿದರು ಎಂದರೆ ಸರಿ. ನನ್ನ ಗಂಡ ತೀರಿಕೊಂಡಾಗ ಅವರ ಕೆಲಸ ಅವಧಿ ಮುಗಿದಿತ್ತು ಹಾಗೂ ಅವರು ಕೆಲಸದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಅವರ ಕೆಲಸದ ಅವಧಿ 6.00 ಗಂಟೆಗೆ ಮುಗಿದಿತ್ತು ಹಾಗೂ ಬೆಳಿಗ್ಗೆ 7.40 ಗಂಟೆಗೆ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಅವರು ತೀರಿಕೊಂಡಿರುತ್ತಾರೆಂದರೆ ಸರಿ. ಸಾಕ್ಷಿ ಮುಂದುವರೆದು ವೈದ್ಯರು ನಮಗೆ ನನ್ನ ಗಂಡನ ಜೀವ ಹೋಗಿ ಎರಡು ಗಂಟೆಯಾಗಿದೆ ಎಂದು ತಿಳಿಸಿರುತ್ತಾರೆ ಹಾಗೂ ಅವರು 4.00 ಗಂಟೆಗೆ ಜೀವ ಬಿಟ್ಟಿದ್ದಾರೆ ಎಂದು ಹೇಳಿದರು ಎಂದು ನುಡಿಯುತ್ತಾರೆ.

2. ಎದುರುದಾರ ನಂ.1 ಇವರು ನಮಗೆ ದಿಃ23/10/2024 ರಂದು 2,44,713/- ರೂ.ಗಳನ್ನು ನೀಡಿರುತ್ತಾರೆಂದರೆ ಸಾಕ್ಷಿ ಹೌದು ಅದು ನನ್ನ ಗಂಡ ದುಡಿದ ಹಣ ಎಂದು ನುಡಿಯುತ್ತಾರೆ. ನಮಗೆ ಹಣ ತಲುಪಿದೆ ಎಂದು ನಾವು ರಶೀದಿ ಸಹ ನೀಡಿರುತ್ತೇವೆ ಎಂದರೆ ಸರಿ. ಸದರಿ ಮೊತ್ತದಲ್ಲಿ 1,86,923/- ರೂ. gratuity ಮೊತ್ತ, 7,789/- ರೂ. 15 ದಿನಗಳ ಸಂಬಳ ಹಾಗೂ ex-gracia ಎಂದು 50 ಸಾವಿರ ನೀಡಿರುತ್ತಾರೆ ಎಂದರೆ ಸಾಕ್ಷಿ ಒಟ್ಟು ಅಷ್ಟು ಮೊತ್ತ ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ಎದುರುದಾರ ನಂ.1 ಕಾನೂನುಬದ್ಧವಾಗಿ ನೀಡಬೇಕಾದ ಮೊತ್ತವನ್ನು ಕೊಟ್ಟ ಕಾರಣ ಯಾವುದೇ ಮೊತ್ತ ಕೊಡುವುದು ಬಾಕಿ ಇಲ್ಲ ಎಂದರೆ ಸರಿಯಲ್ಲ. ಇನ್ನೂ ಏನಾದರೂ ಮೊತ್ತ ಕೊಡಬೇಕಾದರೆ ಅದನ್ನು ಎದುರುದಾರ ನಂ.2 ಇವರೇ ಕೊಡಬೇಕು ಎಂದರೆ ಸರಿಯಲ್ಲ. ನನ್ನ ಗಂಡ ಕೆಲಸ ಅವಧಿಯಲ್ಲಿ ಇದ್ದಾಗ ತೀರಿಕೊಂಡಿಲ್ಲ ಎಂದರೆ ಸರಿಯಲ್ಲ. ಅವರಿಗೆ ಹೃದಯದ ಖಾಯಿಲೆ ಇತ್ತು ಹಾಗೂ ಹೃದಯಾಘಾತದಿಂದ ಕೆಲಸದ ಅವಧಿ ಮುಗಿದ ನಂತರ ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ರಾತ್ರಿ ತ್ರಾಸ್ ಆಯಿತು ಎಂದು ನನ್ನ ಮಗ ನನಗೆ ಹೇಳಿದರು. ಅವರಿಗೆ ರಾತ್ರಿಯೇ ತೊಂದರೆಯಾಗಿ ತೀರಿಕೊಂಡಿರುತ್ತಾರೆ ಹಾಗೂ ಅವರನ್ನು ನೋಡಲು ಯಾರೂ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು

ಕೇಳಿಕೊಂಡ ಹಾಗೆ ಎದುರುದಾರ ನಂ.1 ನಮಗೆ ಯಾವುದೇ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**(ಪಾಟೀ ಸವಾಲುಃ ಮುಂದುವರೆದ ಪಾಟಿ ಸವಾಲಿಗೆ 1 ನೇ ಎದುರುದಾರರ ಪರ ವಕೀಲರು ಸಮಯಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು).**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**